# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಐಡೆಂಟಿಫಿಕೇಷನ್ ಸಂಖ್ಯೆ (CIN) : U40109KA2004SGC035177

ನಿಗಮದ ನೋಂದಾಯಿತ ಕಛೇರಿ ವಿಳಾಸ:
ನಂ.29, 2ನೇ ಮಹಡಿ, ಕಾವೇರಿ ಗ್ರಾಮೀಣ ಬ್ಯಾಂಕ್ ರಸ್ತೆ,
ವಿಜಯನಗರ, 2ನೇ ಹಂತ, ಮೈಸೂರು-570017 ; Web: www.cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)ರವರ ಕಛೇರಿ, ಕಾರ್ಯ ಮತ್ತು ಪಾಲನಾ ಉಪ-ವಿಭಾಗ,
ವಿರಾಜಪೇಟೆ - 571218
ದೂರವಾಣಿ: 9480837545
ಇಮೇಲ್: aeesdvnet@gmail.com

ಸಕಾನಿಇಂ(ವಿ)/ಕಾಮತ್ತುಪಾ ಉವಿ/ವಿ.ಪೇಟೆ /2020-21/ 1048 ದಿನಾಂಕ: 5/12/2020

## ಸಭಾ ನಡಾವಳಿ

ದಿನಾಂಕ 10.11.2020 ರಂದು ವಿರಾಜಪೇಟೆ ಉಪವಿಭಾಗದಲ್ಲಿ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ಕ), ಸೆಸ್ಕ್, ಮಡಿಕೇರಿ ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕಸಭೆಯಲ್ಲಿ ವಿರಾಜಪೇಟೆ ಉಪವಿಭಾಗಕ್ಕೆ ಸಂಬಂದಿಸಿದಂತೆ ಬಂದ ದೂರುಗಳು ಹಾಗೂ ತೆಗೆದುಕೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

| ಕ್ರಮ ಸಂಖ್ಯೆ | ಸಲಹೆ/ದೂರು ಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಅನುಸರಣೆ |
|---|---|---|---|
| 1 | ಶ್ರೀ.ಜೋಸೆಫ್ ಮೆನೆಜಸ್ ಮತ್ತು ಶ್ರೀ.ಮೋಹನ್.ವಿ.ಎಸ್. ಗಾಂಧಿನಗರ, ವಿರಾಜಪೇಟೆ ದೂ:9448814075 ದೂ.9480556767 | * ತಮ್ಮ ಮನೆಯು ಗಾಂಧಿನಗರದದಲ್ಲಿದ್ದು ಸದರಿ ಬಡಾವಣೆಯು ವಿದ್ಯುಧ್ಧೀಕರಣವು ವಿಳಂಭವಾಗಿದ್ದು ಗೃಹಪಯೋಗಕ್ಕೆ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದುಕೊಂಡಿದ್ದು ಸದರಿ ಸಂಪರ್ಕಕ್ಕೆ ಪ್ರೀ-ಪೈಡ್ ಮಾಪಕ ಅಳವಡಿಕೆಯಿಂದ ಹೆಚ್ಚು ವಿದ್ಯುತ್ ಶುಲ್ಕ ತಗುಲುತ್ತಿದ್ದು ಬಡಾವಣೆಯ ವಿದ್ಯುಧ್ಧೀಕರಣವನ್ನು ಶೀಘ್ರಗತಿಯಲ್ಲಿ ಮಾಡುವಂತೆ ಹಾಗೂ ತಾತ್ಕಾಲಿಕ ಸಂಪರ್ಕಕ್ಕೆ ಹಳೆಯ ಮಾಪಕವನ್ನು ಅಳವಡಿಸುವಂತೆ ಕೋರಿದರು. | * ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಕ) ಮಡಿಕೇರಿ ರವರು ಬಡಾವಣೆಯ ವಿದ್ಯುಧ್ಧೀಕರಣಕ್ಕೆ ಸಂಭಂಧಿಸಿದಂತೆ ಬಡಾವಣೆಗೆ ಪ್ರತ್ಯೇಕ ನಿಯಮವಿದ್ದು ನಿಯಮಾನುಸಾರ ಇಲಾಖಾ ವತಿಯಿಂದ ಅಂದಾಜುಪಟ್ಟಿ ತಯಾರಿಸಿ ವಿದ್ಯುತ್ ಮಂಜೂರಾತಿ ನೀಡಿದ್ದು ಸದರಿ ಕಡತದ ಶೇವಣೆ ಮೊತ್ತವನ್ನು ಸಂಭಂಧಿಸಿದ ಬಡಾವಣೆಯ ಮಾಲೀಕ ಮಾಡಬೇಕಾಗಿದ್ದು ಇಲ್ಲಿಯವರಗೆ ಯಾವುದೇ ಶೇವಣೆಯನ್ನು ಪಾವತಿಸದ ಕಾರಣ ಅನುಮೋದನೆ ನೀಡಿರುವುದಿಲ್ಲವಾಗಿ ತಿಳಿಸಿದರು ಮುಂದುವರಿದು ತಾತ್ಕಾಲಿಕ ಸ್ಥಾವರಕ್ಕೆ ನಿಗಮದ ನಿಯಮಾನುಸಾರ ಪ್ರೀ-ಪೈಡ್ ಮಾಪಕವು ಕಡ್ಡಾಯವಾಗಿದ್ದು ಮೇಲಧಿಕಾರಿಯೊಂದಿಗೆ ಚರ್ಚಿಸುವುದಾಗಿ ತಿಳಿಸಿದರು. |
| 3 | ಚೋಕಂಡ.ಈಶ್ವರಿ ಮೊಣ್ಣಪ್ಪ, ಮಗ್ಗುಲ ಗ್ರಾಮ, ವಿರಾಜಪೇಟೆ ದೂ.9663590279 | * ತಮ್ಮ ವಾಸ ಮನೆಯ ಪಕ್ಕದಲ್ಲಿರುವ ಕಂಬವನ್ನು ತೆರವುಗೊಳಿಸುವ ಬಗ್ಗೆ ಪತ್ರವನ್ನು ನೀಡಿರುತ್ತಾರೆ. | * ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ಕ) ರವರು ಕಂಬ ಸ್ಥಳಾಂತರ ಕಾರ್ಯವನ್ನು ಸ್ವಯಂನಿರ್ವಹಣಾ ಯೋಜನೆಯಡಿ ಮಾಡಬೇಕಾಗಿದ್ದು ಸಂಭಂಧಿಸಿದ ಶಾಖಾಧಿಕಾರಿಗೆ ಸ್ಥಳ ಪರಿಶೀಲಿಸಿ ಕೂಡಲೇ ನಿಗಮದ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 4 | ಶ್ರೀ.ಹಂಸ, ಹುಂಡಿ ಬಾಡಗ ಬಾಣಂಗಾಲ ದೂ:9945034315 | * ಹುಂಡಿ ಗ್ರಾಮದ ಪರಿವರ್ತಕದಲ್ಲಿ ವೋಲ್ಟೇಜ್ ಸಮಸ್ಯೆಯಿರುವುದಾಗಿ ಸದರಿ ಸ್ಥಳವನ್ನು ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್(ವಿ) ರವರು ಈಗಾಗಲೇ ಸ್ಥಳ ಪರಿಶೀಲನೆ ಮಾಡಿದ್ದು ಶೀಘ್ರ ಹೊಸ ಪರಿವರ್ತಕ ಅಳವಡಿಸುವಂತೆ ಕೋರಿದರು. | * ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ಕ) ರವರು ಸಂಭಂಧಿಸಿದ ಶಾಖಾಧಿಕಾರಿಗೆ ಸ್ಥಳ ಪರಿಶೀಲಿಸಿ ಕೂಡಲೇ ನಿಗಮದ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 5 | ಶ್ರೀ.ಮುನೀರ್, ಬಾಡಗ ಬಾಣಂಗಾಲ, ಹುಂಡಿ ದೂ:9902650034 | * ತಮ್ಮ ತೋಟದಲ್ಲಿ ಹಾದುಹೋಗಿರುವ ಹೆಚ್.ಟಿ ವಿದ್ಯುತ್ ತಂತಿಯೂ ಆಗಾಗ ತುಂಡಾಗಿ ಬೀಳುತ್ತಿರುವುದಾಗಿಯೂ ಮತ್ತು ತೀವ್ರ ಕೆಳಮಟ್ಟದಲ್ಲಿರುವ ಬಗ್ಗೆ. | * ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ಕ) ರವರು ಸಂಭಂಧಿಸಿದ ಶಾಖಾಧಿಕಾರಿಗೆ ಸ್ಥಳ ಪರಿಶೀಲಿಸಿ ಕೂಡಲೇ ತೀವ್ರ ಕೆಳಮಟ್ಟದಲ್ಲಿರುವ ವಾಹಕಗಳಿರುವ ಸ್ಥಳದಲ್ಲಿ ಮಧ್ಯಂತರ ಕಂಬಗಳನ್ನು ಅಳವಡಿಸಿ ನಿಗಮದ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |

Scanned with CamScanner

| | | | |
|---|---|---|---|
| | | | ಕೈಗೊಳ್ಳುವಂತೆ ಸೂಚಿಸಿದರು. |
| 6 | ಶ್ರೀ.ನಂಜಪ್ಪ, ಬೇಟೋಳಿ ಗ್ರಾಮ, ವಿರಾಜಪೇಟೆ<br>ದೂ:9449790189 | • ತಮ್ಮ ಪಕ್ಕದ ನಿವಾಸಕ್ಕೆ ಎಳೆದಿರುವ ಎಲ್.ಟಿ ಮಾರ್ಗದ ವಾಹಕವದ ಪಕ್ಕ ಮರಗಿಡಗಳಿದ್ದು ಸದರಿ ಮಾರ್ಗಕ್ಕೆ ಹೆಚ್ಚುವರಿ ಹ್ಯಾಂಗುಲರ್ ಅಳವಡಿಸುವಂತೆ ಕೋರಿದರು.<br>• ಸದರಿ ಜಾಗದಲ್ಲಿ ಎಲ್.ಟಿ ಮಾರ್ಗದ ವಾಹಕವು ಕಂಬದ ನಿಗಧಿತ ಮಟ್ಟದಿಂದ ಕೆಳ ಜಾರಿದ್ದು ಸರಿಪಡಿಸುವಂತೆ ಕೋರಿದರು.<br>• ಸದರಿ ಜಾಗದಲ್ಲಿ ದೊಡ್ಡ ಮರವೊಂದು ಬೀಳುವ ಅಂತದಲ್ಲಿದ್ದು ಸದರಿ ಮರವು ಬಿದ್ದಲ್ಲಿ ಹಲವು ಕಂಬಗಳಿಗೆ ಹಾನಿಯಾಗುವ ಸಂಭವವಿದ್ದು ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿದರು.<br>• ಸದರಿ ಮಾರ್ಗದ ವಿದ್ಯುತ್ ಅಡಚಣೆಯನ್ನು ಕಡಿಮೆಗೊಳಿಸುವಂತೆ ತಿಳಿಸಿದರು. | • ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ಕ) ರವರು ಸಂಭಂಧಿಸಿದ ಶಾಖಾಧಿಕಾರಿಗೆ ಸ್ಥಳ ಪರಿಶೀಲಿಸಿ ಕೂಡಲೇ ನಿಗಮದ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 7 | ಶ್ರೀ.ಪಿ.ಬಿ.ಅಪ್ಪಯ್ಯ, ಬೇಟೋಳಿ ಗ್ರಾಮ<br>ದೂ:9480645724 | • ತಮ್ಮ ತೋಟದಲ್ಲಿ ಹಾದು ಹೋಗಿರುವ ವಿದ್ಯುತ್ ತಂತಿಯ ಕೆಳಮಟ್ಟದಲ್ಲಿರುವುದಾಗಿಯೂ ಹಾಗೂ ವರ್ಷ ವರ್ಷ ತುಂಡಾಗಿ ಬೀಳುತ್ತಿರುವುದರಿಂದ ಹೊಸ ವಿದ್ಯುತ್ ತಂತಿಯನ್ನು ಅಳವಡಿಸುವಂತೆ ಕೋರಿದರು. | • ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ಕ) ರವರು ಸಂಭಂಧಿಸಿದ ಶಾಖಾಧಿಕಾರಿಗೆ ಸ್ಥಳ ಪರಿಶೀಲಿಸಿ ಕೂಡಲೇ ತೀವ್ರ ಕೆಳಮಟ್ಟದಲ್ಲಿರುವ ವಾಹಕಗಳಿರುವ ಸ್ಥಳದಲ್ಲಿ ಮಧ್ಯಂತರ ಕಂಬಗಳನ್ನು ಅಳವಡಿಸಿ ನಿಗಮದ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 8 | ಶ್ರೀ.ಕೆ.ಎ.ಸೋಮಯ್ಯ, ಬೇಟೋಳಿ ಗ್ರಾಮ<br>ದೂ:9739839929 | • ಸದರಿಯವರಿಗೆ ವಿತರಿಸಲಾಗಿರುವ ವಿದ್ಯುತ್ ಆರ್.ಆರ್.ಸಂಖ್ಯೆ:ಎ.ಇ.ಎಚ್-13519 ಗೆ 5-6 ತಿಂಗಳಿನಿಂದ ಒಂದೇ ರೀಡಿಂಗ್ ನೀಡುತ್ತಿರುವುದಾಗಿ ತಿಳಿಸಿದರು. | • ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ಕ) ರವರು ಸಂಭಂಧಿಸಿದ ಶಾಖಾಧಿಕಾರಿಗೆ ಸ್ಥಳ ಪರಿಶೀಲಿಸಿ ಮಾಪಕ ಹಾಗೂ ಮಾಪಕದ ಗಣಾಂಕವನ್ನು ಪರಿಶೀಲಿಸಿ ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 9 | ಶ್ರೀಮತಿ.ಕೆ.ಪಿ.ಭವಾನಿ, ಕುಕ್ಲೂರು ಗ್ರಾಮ<br>ದೂ:9482238240 | • ಸದರಿಯವರಿಗೆ ವಿದ್ಯುತ್ ಸಂಪರ್ಕ ನೀಡಲು ಹಲವು ವರ್ಷಗಳ ಹಿಂದೆ ಅಳವಡಿಸಲಾಗಿರುವ ಕಂಬವು ಬೇರೆಯವರ ನಿವೇಶನದಲ್ಲಿರುವುದರಿಂದ ಕಂಬವನ್ನು ಸ್ಥಳಾಂತರ ಮಾಡುವಂತೆ ಕೋರಿದರು. | • ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ಕ) ರವರು ಕಂಬ ಸ್ಥಳಾಂತರ ಕಾರ್ಯವನ್ನು ಸ್ವಯಂನಿರ್ವಹಣಾ ಯೋಜನೆಯಡಿ ಮಾಡಬೇಕಾಗಿದ್ದು ಸಂಭಂಧಿಸಿದ ಶಾಖಾಧಿಕಾರಿಗೆ ಸ್ಥಳ ಪರಿಶೀಲಿಸಿ ಕೂಡಲೇ ನಿಗಮದ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 10 | ಶ್ರೀ.ಎಂ.ಪಿ.ಅಯ್ಯಪ್ಪ, ನಾಲ್ಕೇರಿ ಗ್ರಾಮ<br>ದೂ:9480180620 | • ತಮ್ಮ ತೋಟದಲ್ಲಿ ಹಾದು ಹೋಗಿರುವ ವಿದ್ಯುತ್ ತಂತಿಯು ತುಂಬಾ ಕೆಳಮಟ್ಟದಲ್ಲಿದ್ದು ಅಪಾಯಕರವಾಗಿರುವುದಾಗಿರುವುದರಿಂದ ಮಧ್ಯಂತರ ಕಂಬ ಅಳವಡಿಸುವಂತೆ ಕೋರಿದರು. | • ಇದಕ್ಕೆ ಉತ್ತರಿಸಿದ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ಕ) ರವರು ಸಂಭಂಧಿಸಿದ ಶಾಖಾಧಿಕಾರಿಗೆ ಸ್ಥಳ ಪರಿಶೀಲಿಸಿ ಕೂಡಲೇ ತೀವ್ರ ಕೆಳಮಟ್ಟದಲ್ಲಿರುವ ವಾಹಕಗಳಿರುವ ಸ್ಥಳದಲ್ಲಿ ಮಧ್ಯಂತರ ಕಂಬಗಳನ್ನು ಅಳವಡಿಸಿ ನಿಗಮದ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪವಿಭಾಗ ಸೆಸ್ಕ್
ವಿರಾಜಪೇಟೆ.

ಪ್ರತಿಯನ್ನು:-

1. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಸೆಸ್ಕ್, ಮಡಿಕೇರಿ. ಇವರ ದಯಾಪರ ಅವಗಾಹನೆಗೆ ಸಲ್ಲಿಸಲಾಗಿದೆ.
2. ಎಲ್ಲಾ ಗ್ರಾಹಕರ ಸಲಹಾ ಸಮಿತಿ ಸದಸ್ಯರುಗಳ ಮಾಹಿತಿಗಾಗಿ.
3. ಶಾಖಾಧಿಕಾರಿಗಳು, ಕಾ ಮತ್ತು ಪಾ ವಿರಾಜಪೇಟೆ/ಅಮ್ಮತ್ತಿರವರುಗಳ ಮಾಹಿತಿಗಾಗಿ.
4. ಕಛೇರಿ ಪ್ರತಿ

Scanned with CamScanner